# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 221 (297) |
| ಉತ್ತರಿಸಬೇಕಾದ ದಿನಾಂಕ | 14.09.2021 |
| ಉತ್ತರಿಸುವವರು | ನಗರಾಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಿವಮೊಗ್ಗ ನಗರದಲ್ಲಿ 24x7 ಕುಡಿಯುವ ನೀರಿನ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ; ಯಾವ ಹಂತದಲ್ಲಿ ಕಾಮಗಾರಿ ನಡೆಯುತ್ತಿದೆ;</td><td>ಶಿವಮೊಗ್ಗ ನಗರದಲ್ಲಿ ರೂ.135.86 ಕೋಟಿ ಮೊತ್ತದ 24x7 ಕುಡಿಯುವ ನೀರಿನ ಕಾಮಗಾರಿಯನ್ನು ದಿನಾಂಕ:21.08.2017 ರಂದು ಪ್ರಾರಂಭಿಸಲಾಗಿದೆ.<br>ಈ ಕಾಮಗಾರಿಯ ಪ್ರಗತಿಯು ಕೆಳಕಂಡಂತಿದೆ
<table>
<tr><th rowspan="2">ಕ್ರ.ಸಂ</th><th colspan="3">ಕಾಮಗಾರಿಯ ವಿವರ</th></tr>
<tr><th>ಕಾಮಗಾರಿಯ ಹೆಸರು</th><th>ಟೆಂಡರ್ ನಂತೆ</th><th>ಸಾಧಿಸಿದ ಪ್ರಗತಿ</th></tr>
<tr><td>1)</td><td>ಕೊಳವೆ ಮಾರ್ಗ</td><td>701 ಕಿ.ಮೀ</td><td>540ಕಿ.ಮೀ</td></tr>
<tr><td>2)</td><td>ಗೃಹ ಸಂಪರ್ಕ</td><td>55898 ಸಂಖ್ಯೆ</td><td>25584 ಸಂಖ್ಯೆ</td></tr>
<tr><td>3)</td><td>ಆರ್ಥಿಕ ಪ್ರಗತಿ</td><td colspan="2">ರೂ.69.00 ಕೋಟಿ (55%)</td></tr>
<tr><td>4)</td><td>ಭೌತಿಕ ಪ್ರಗತಿ</td><td colspan="2">65 %</td></tr>
</table></td></tr>
<tr><td>ಆ)</td><td>ಕುಡಿಯುವ ನೀರಿನ ಕಾಮಗಾರಿ ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು;</td><td>ಕಾಮಗಾರಿ ಪ್ರಗತಿ ಪರಿಶೀಲನೆಯನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮಾನ್ಯ ನಗರಾಭಿವೃದ್ಧಿ ಸಚಿವರ ಸಮ್ಮುಖದಲ್ಲಿ ದಿನಾಂಕ :01.07.2021 ರಂದು ನಡೆಸಿ, ಒಟ್ಟಾರೆ ಈ ಯೋಜನೆಯನ್ನು ದಿನಾಂಕ :31.03.2022 ರೊಳಗೆ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ.</td></tr>
<tr><td>ಇ)</td><td>ಕಾಮಗಾರಿ ಪೂರ್ತಿಗೊಳ್ಳದಿರಲು ಕಾರಣವೇನು;</td><td>ಈ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದಿರುವ ಕಾರಣಗಳು ಕೆಳಕಂಡಂತಿದೆ<br>1. ಶಿವಮೊಗ್ಗ ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ತೆಗೆದುಕೊಂಡಿರುವ ರಸ್ತೆ ಅಭಿವೃದ್ಧಿ ಮತ್ತು ಇತರೆ ಇಲಾಖೆಯ ಸಮನ್ವಯದೊಂದಿಗೆ ABD ಏರಿಯಾದಲ್ಲಿ 24/7 ಕಾಮಗಾರಿ ಕಾರ್ಯಗತಗೊಳಿಸಲು ಸೈಟ್ ಕ್ಲಿಯರೆನ್ಸ್ ಕೊಡುವಲ್ಲಿ ಆದ ವಿಳಂಬ</td></tr>
</table>

| | | |
|---|---|---|
| | | 2. 2018 ಮತ್ತು 2019 ರಲ್ಲಿ ಅತಿ ಹೆಚ್ಚು ಮಳೆಯಿಂದಾಗಿ ಕಾಮಗಾರಿ ವಿಳಂಬವಾಗಿರುತ್ತದೆ.<br>3. 2020 ಮತ್ತು 2021ರ ಸಾಲಿನಲ್ಲಿ Covid-19ರ lockdown ನಿಂದಾಗಿ ವಿಳಂಬವಾಗಿರುತ್ತದೆ. |
| ಈ) | ಅಮೃತ್ ಯೋಜನೆಯಲ್ಲಿ ಎಷ್ಟು ಕಾಮಗಾರಿಗಳು ಮಂಜೂರಾಗಿದೆ; | ಅಮೃತ್ ಯೋಜನೆಯಡಿ ನಾಲ್ಕು ಕಾಮಗಾರಿಗಳು ಮಂಜೂರಾಗಿದೆ<br>1) ರೂ.42.42 ಕೋಟಿಗಳ ನೀರು ಸರಬರಾಜು ವ್ಯವಸ್ಥೆ.<br>2) ರೂ.58.58 ಕೋಟಿಗಳ ಒಳಚರಂಡಿ ವ್ಯವಸ್ಥೆ.<br>3) ರೂ.7.00 ಕೋಟಿಗಳ ಹೆಚ್ಚುವರಿ ಅನುದಾನದಲ್ಲಿ ಒಳಚರಂಡಿ ವ್ಯವಸ್ಥೆ.<br>4) ರೂ.2.67 ಕೋಟಿಗಳ ರಸ್ತೆ ದುರಸ್ತಿ ಕಾಮಗಾರಿ (ಉಳಿತಾಯದಡಿ) |
| ಉ) | ಅಮೃತ್ ಯೋಜನೆಯ ಕಾಮಗಾರಿಯಲ್ಲಿ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br>ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಅಮೃತ್ ಯೋಜನೆಯ ಕಾಮಗಾರಿಗಳ ಗುಣಮಟ್ಟವನ್ನು ಪರಿವೀಕ್ಷಿಸಲು ಮೆ\|\| ಐ.ಪಿ.ಇ ಗ್ಲೋಬಲ್ ಇಂಡಿಯಾ ರವರನ್ನು PDMC ಎಂದು ನೇಮಿಸಲಾಗಿದ್ದು, ಸದರಿಯವರ ಮೇಲುಸ್ತುವಾರಿಯಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು ಸದರಿಯವರು ವಿವಿಧ ಹಂತಗಳಲ್ಲಿ ತಪಾಸಣೆಯನ್ನು ನಡೆಸಿದ್ದು, ಯಾವುದೇ ಹಂತದಲ್ಲಿಯೂ ಕಾಮಗಾರಿಯು ಕಳಪೆ ಆಗಿರುವುದಿಲ್ಲ ಹಾಗೂ ಮೇಲೆ ತಿಳಿಸಲಾದ ಎಲ್ಲಾ ಅಮೃತ್ ಕಾಮಗಾರಿಗಳನ್ನು ಈಗಾಗಲೇ ಚಾಲನೆಗೊಳಿಸಿ ಸಾರ್ವಜನಿಕರ ಬಳಕೆಗೆ ತರಲಾಗಿದೆ. |

ಸಂಖ್ಯೆ: ನಅಇ 125 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು